ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ

**Karnataka State Rural Development and Panchayat Raj University**

ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101

RaithaBhavana, General Cariappa Circle, Gadag – 582 101

E-mail: ksrdpruadmissions@gmail.com Phone: 08372-230338, Fax: 08372-297343

News about NEP-2020 Workshop on "Curriculum Design and Development Content" published in Kannada Newspaper Dt:16.09.2021



# ಹೊಸ ಶಿಕ್ಷಣ ನೀತಿಯಲ್ಲಿ ಕೌಶಲ್ಯಕ್ಕೆ ಒತ್ತು

## ಕಾರ್ಯಾಗಾರದಲ್ಲಿ ಗ್ರಾವಿವಿ ಕುಲಪತಿ ಪ್ರೊ।ವಿಷ್ಣುಕಾಂತ ಎಸ್.ಚಟಪಲ್ಲಿ ಅಭಿಮತ

**ಗದಗ:** ಇಲ್ಲಿನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ನೂತನ ಶಿಕ್ಷಣ ನೀತಿ-2020 ಅನುಷ್ಠಾನಕ್ಕಾಗಿ ಪದವಿ ತರಗತಿಗಳಿಗೆ 'ಪಠ್ಯ ವಿನ್ಯಾಸ ಮತ್ತು ಪಠ್ಯವಸ್ತು ಅಭಿವೃದ್ಧಿ' ವಿಷಯದ ಕುರಿತು ಮೂರು ದಿನಗಳ ಕಾರ್ಯಾಗಾರ ನಡೆಯಿತು.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಆಂತರಿಕ ಗುಣಮಟ್ಟ ಭರವಸೆ ಕೋಶ ಹಾಗೂ ಬೆಂಗಳೂರಿನ ಸೆಂಟರ್ ಫಾರ್ ಎಜುಕೇಶನಲ್ ಅಂಡ್ ಸೋಶಿಯಲ್ ಸ್ಟಡೀಸ್ ಇವರ ಸಹಯೋಗದಲ್ಲಿ ವಿಶ್ವವಿದ್ಯಾಲಯದ ಕೌಶಲ್ಯ ವಿಕಾಸ ಭವನದ ಸಭಾಂಗಣದಲ್ಲಿ ಬುಧವಾರ ನಡೆದ ಕಾರ್ಯಾಗಾರದ ಸಮಾರೋಪದ ಭಾಗವಾಗಿ ಆಯಾ ವಿಷಯಗಳಿಗೆ ಸಂಬಂಧಿಸಿ ತಂಡಗಳ ನೇತೃತ್ವ ವಹಿಸಿದ್ದ ವಿಷಯ ತಜ್ಞರು, ಉದ್ದೇಶಿತ ಪಠ್ಯ ವಿಷಯಗಳ ಕ್ರಿಯಾ ಯೋಜನೆ ಮಂಡಿಸಿದರು.

ಮೌಲ್ಯಯುತ ಶಿಕ್ಷಣ, ಭೋದನೆ ಮತ್ತು ಕಲಿಕೆಯಲ್ಲಿ ವಿಭಿನ್ನ ಪರಿಕಲ್ಪನೆ ಹಾಗೂ ವಿದ್ಯಾರ್ಥಿಗಳಲ್ಲಿ ಕೌಶಲ್ಯತೆ, ಸಂಶೋಧನಾ ಆಸಕ್ತಿ, ಕ್ರಿಯಾಶೀಲತೆ ಹೆಚ್ಚಿಸುವ ನಿಟ್ಟಿನಲ್ಲಿ ಪಠ್ಯ ವಿಷಯಗಳನ್ನು ತಯಾರಿಸಲಾಗಿದೆ. ಕೇಂದ್ರ ಸರಕಾರ ಜಾರಿಗೊಳಿಸಿರುವ ನೂತನ ಶಿಕ್ಷಣ ನೀತಿ-2020ರ ಆಶಯವನ್ನು ಇಮ್ಮಡಿಗೊಳಿಸಲಿದೆ ಎಂದು ವಿಷಯ ತಜ್ಞರು ಹಾಗೂ ಹಿರಿಯ ಪ್ರಾಧ್ಯಾಪಕರು ಆಶಯ ವ್ಯಕ್ತಪಡಿಸಿದರು.

ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಗ್ರಾವಿವಿ ಕುಲಪತಿ ಪ್ರೊ।ವಿಷ್ಣುಕಾಂತ ಎಸ್.ಚಟಪಲ್ಲಿ ಅವರು, ರಾಷ್ಟ್ರೀಯ ಹೊಸ ಶಿಕ್ಷಣ ನೀತಿ-2020 ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗಾಗಿ ಕೌಶಲ್ಯಾಧಾರಿತ ಹಾಗೂ ಮೌಲ್ಯಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಕಾರ್ಯಾಗಾರದಲ್ಲಿ ಪಾಲ್ಗೊಂಡಿರುವ ರಾಜ್ಯದ ವಿವಿಧ ಭಾಗಗಳಿಂದ ಹಲವು ವಿಭಾಗಗಳ ವಿಷಯ ಪರಿಣಿತರು, ಕೈಗಾರಿಕಾ ಪರಿಣಿತರು ಹಾಗೂ ವೃತ್ತಿ ಪರಿಣಿತರು ಎನ್‌ಇಪಿ ಆಶಯಕ್ಕೆ ಪೂರಕವಾಗಿ ಮೌಲ್ಯಯುತ ಪಠ್ಯ ತಯಾರಿಸಿದ್ದಾರೆ. ಈ ಪಠ್ಯ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಈ ಪಠ್ಯ ವಾಸ್ತವದಲ್ಲಿ ನೂತನ ಶಿಕ್ಷಣ ನೀತಿಯ ಕೌಶಲ್ಯಾಧಾರಿತ, ಮೌಲ್ಯಾಧಾರಿತ ಹಾಗೂ ವ್ಯಕ್ತಿತ್ವ ವಿಕಸನದ ಎಲ್ಲ ಉದ್ದೇಶಗಳನ್ನು ಸಾಕಾರಗೊಳಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಗ್ರಾವಿವಿ ಕುಲಸಚಿವ ಬಸವರಾಜ ಎಲ್. ಲಕ್ಕಣ್ಣವರ, ಹಣಕಾಸು ಅಧಿಕಾರಿ ಪ್ರಶಾಂತ ಜೆ.ಸಿ., ಆಂತರಿಕ ಗುಣಮಟ್ಟ ಖಾತ್ರಿ ಕೋಶದ ಸಂಯೋಜಕ ಡಾ।ಅಭಯಕುಮಾರ್ ಗಸ್ತಿ, ಹಿರಿಯ ಶಿಕ್ಷಣ ಸಲಹೆಗಾರರ ಡಾ।ರಾಜೇಂದ್ರ ಕುಮಾರ್ ವಿ. ಜೋಶಿ, ಪ್ರಾಧ್ಯಾಪಕರು ಹಾಗೂ ಆಇಖಖಿ ಮುಖ್ಯಸ್ಥೆ ಡಾ।ಪದ್ಮಾವತಿ ಬಿ.ಎಸ್. ಹಾಗೂ ವಿವಿಧ ವಿಷಯಗಳ ಪರಿಣತರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಸೆ.13 ರಂದು ಆರಂಭಗೊಂಡ ಕಾರ್ಯಾಗಾರವನ್ನು ವಿಜಯಪುರದ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ।ಮೀನಾ ಆರ್. ಚಂದಾವರಕರ ಉದ್ಘಾಟಿಸಿದರು.

ಕಾರ್ಯಾಗಾರದಲ್ಲಿ ವಿವಿಧ ವಿಷಯ ತಜ್ಞರು ಹಾಗೂ ಹಿರಿಯ ಪ್ರಾಧ್ಯಾಪಕರು ಸತತ ಮೂರು ದಿನಗಳ ಕಾಲ ಪಠ್ಯಕ್ರಮ ರೂಪಿಸುವ ನಿಟ್ಟಿನಲ್ಲಿ ಸುದೀರ್ಘ ಚರ್ಚೆ ನಡೆಸಿದರು.

ಗ್ರಾವಿವಿ ಪದವಿಗಳಿಗೆ ಸಂಬಂಧಿಸಿ ಆಯಾ ಕ್ಷೇತ್ರಗಳ ವಿಷಯ ತಜ್ಞರು ಹಾಗೂ ಹಿರಿಯ ಬೋಧಕರನ್ನು ಒಳಗೊಂಡಂತೆ ಪ್ರತ್ಯೇಕ ಗುಂಪುಗಳನ್ನಾಗಿ ವಿಂಗಡಿಸಲಾಗಿತ್ತು. ಅವರು ಸತತ ಮೂರು ದಿನಗಳ ಕಾಲ ಚರ್ಚೆ, ಸಮಾಲೋಚನೆ ಮೂಲಕ ಪಠ್ಯಕ್ರಮದ ವಿಷಯ ವಸ್ತುಗಳ ಕುರಿತು ವಿವರಣಾತ್ಮಕವಾಗಿ ವರದಿ ಮಂಡಿಸಿದರು.

**ಗದಗ: ಕರ್ನಾಟಕ ರಾಜ್ಯ ಗ್ರಾವಿವಿನಲ್ಲಿ ನೂತನ ಶಿಕ್ಷಣ ನೀತಿ-2020 ಕುರಿತು ನಡೆದ ಕಾರ್ಯಾಗಾರದಲ್ಲಿ ಕುಲಪತಿ ಪ್ರೊ।ವಿಷ್ಣುಕಾಂತ ಎಸ್.ಚಟಪಲ್ಲಿ ಮಾತನಾಡಿದರು.**

ಗಣೇಶ ಮೂರ್ತಿ ಪ್ರತಿಷ್ಠಾಪನೆ ಅವಧಿ ವಿಸ್ತರಣೆ ಸ್ವಾಗತಾರ್ಹ